FIFTEENTH REPORT OF THE COMMITTEE OR PRIVATE MEMBERS' BILLS AND RESOLUTIONS PRESENTATION

Sri B. P. KADAM (Deputy Speaker).— Madam, I beg to present the Fifteenth Report of the Committee on Private Members' Bills and Resolutions.

MADAM SPEAKER.— The Report is presented.

Sri KAGODU THIMMAPPA (Sagar). Madam, I beg to move "That this Assembly agrees with the Fifteenth Report of the Committee on Private Members' Bills and Resolutions."

MADAM SPEAKER.— The question is that the Assembly agrees with the fifteenth report of the Committee on Private Members' Bills and Resolution".

The Motion was adopted.

VACANT POSTS OF TEACHERS IN HASSAN HIGH SCHOOLS

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ಮಾನ್ಯ ಅಧ್ಯಕ್ಷರೇ—ನಾನು ತಮ್ಮ ಕಡೆಗೆ ಒಂದು ನೋಟೀಸನ್ನು ಅಂದರೆ ವಿದ್ಯಾಸಚಿವರಿಗೆ ಅದು ಸಂಬಂಧ ಪಟ್ಟದ್ದು ಕಳುಹಿಸಿದ್ದೆ. ಅದರ ಬಗ್ಗೆ ಎನೂ ತೀರ್ಮಾನವಾಗಲಿಲ್ಲ.

ಅಧ್ಯಕ್ಷರು.— ನೀವು ಕಳುಹಿದ್ದ ಸೂಚನೆಯನ್ನು ವಿದ್ಯಾಮಂತ್ರಿಗಳ ಆಫೀಸಿಗೆ ಕಳುಹಿಸಿದೆ. ಅಲ್ಲಿಂದ ಇನ್ನೂ ಉತ್ತರ ಬಂದಿಲ್ಲ....

ಶ್ರೀ ಕೆ. ಎಚ್. ಹನುಮೇಗೌಡ.— ಅಧ್ಯಕ್ಷರೇ : ವಿಚಾರ ಬಹಳ ಗಹನ ವಾದದ್ದು. ನಮ್ಮ ಹಾಸನ ಜಿಲ್ಲೆಯ ಅನೇಕ ಸರ್ಕಾರಿ, ತಾಲ್ಲೂಕ ಬೋರ್ಡು ಮತ್ತು ಇತರೇ ಖಾಸಗೀ ಹೈಸ್ಕೂಲುಗಳಲ್ಲಿ ಪಾಠಹೇಳತಕ್ಕ ಉಪಾಧ್ಯಾಯರುಗಳೇ ಇಲ್ಲ. ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಉಪಾಧ್ಯಾಯರೇ ಇಲ್ಲ ಎಂದರೆ ಹುಡುಗರು ಪರೀಕ್ಷೆಯಲ್ಲಿ ಪಾಸಾಗುವುದೆಲ್ಲಿದೆ? ಆ ಹುಡುಗರ ಗತಿಯೇನು? ಸರ್ಕಾರದವರನ್ನು ಕೇಳಿದರೆ ಎಕಾನಮಿ ಮೆಷರ್ಸ್ ಜಾರಿಯಲ್ಲಿರುವುದರಿಂದ ಯಾರನ್ನೂ ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ಸರಿಯೇ? ಈ ಪಾಠಪ್ರವಚನಗಳನ್ನು ನಡೆಸತಕ್ಕ ಉಪಾಧ್ಯಾಯ ವರ್ಗಕ್ಕೂ ಇದು ಅನ್ವಯವಾಗುತ್ತದೆಯೇ? ಮಾನ್ಯ ಸಚಿವರಿಲ್ಲೇ ಇದ್ದಾರೆ....

ಶ್ರೀ ಎ. ಆರ್. ಬದ್ರಿನಾರಾಯಣ (ವಿದ್ಯಾ ಶಾಖೆಯ ಮಂತ್ರಿಗಳು) — ಆ ವಿಷಯವೇನೆಂಬುದೇ ನನ್ನ ಗಮನಕ್ಕೆ ಬಂದಿಲ್ಲ....